

## ಕೆಮ್ಮುನಿಯ

ಕೆಮ್ಮುನಿಯ, ಕೆಂಪು ಅವದಾವತ್ (red avadavat) ಮತ್ತು ಸ್ಟ್ರಾಬೆರಿ ಕೊಕ್ಕು (strawberry finch) ಎಂದು ಕರೆಸಿಕೊಳ್ಳುವ ಈ ಪಕ್ಷಿಯು ಲಾಂಚುರ ಜಾತಿ (lanchura) ಮತ್ತು ಎಸ್ಟ್ರಿಲ್ಡಿಡೇ( estrildidae) ಕುಟುಂಬಕ್ಕೆ ಸೇರಿರುತ್ತದೆ.

ಈ ಪಕ್ಷಿಯು ಗುಬ್ಬಚ್ಚಿ ಗಾತ್ರದಾಗಿದ್ದು, ಮರಿ ಮಾಡುವ ಸಮಯದಲ್ಲಿ ಮೈಯೆಲ್ಲ ಕಡುಗೆಂಪು ಬಣ್ಣ, ಮೈಮೇಲೆ ಅಲ್ಲೊಂದಿಲ್ಲೊಂದರಂತೆ ಬಿಳಿಯ ಚುಕ್ಕೆಗಳನ್ನು ಹೊಂದಿರುತ್ತದೆ. ರೆಕ್ಕೆಗಳು ಕಂದುಬಣ್ಣದಾಗಿದ್ದು, ಕೊಕ್ಕು ಮತ್ತು ಕಣ್ಣಿನ ನಡುವೆ ಕಪ್ಪು ಬಣ್ಣ ಇದ್ದು, ಕಣ್ಣಿನ ಕೆಳಗೆ ಅರ್ಧ ಚಂದ್ರಾಕೃತಿಯಲ್ಲಿ ಬಿಳಿ ಬಣ್ಣ ಹೊಂದಿರುತ್ತವೆ. ಭಾರತದ ಎಲ್ಲಾ ಕಡೆಗಳಲ್ಲಿಯೂ ಕಾಣಸಿಗುತ್ತದಲ್ಲದೆ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಬರ್ಮಾ ಮುಂತಾದ ಕಡೆಗಳಲ್ಲಿಯೂ ಸಿಗುತ್ತವೆ. ಇವು ಜೌಗು ಪ್ರದೇಶ ಮತ್ತು ಎತ್ತರದ ಹುಲ್ಲಿನಲ್ಲಿ ಇರುತ್ತವೆ. ಕೀಟಗಳು, ಹುಲ್ಲಿನ ಬೀಜಗಳು ಹಾಗೂ ಧಾನ್ಯಗಳು ಇವುಗಳ ಆಹಾರ. ಗಟ್ಟಿ ಕಾಳುಗಳನ್ನು ಅಗಿಯಲು ಬೇಕಾದ ಗಟ್ಟಿ ಕೊಕ್ಕುಗಳಿವೆ.

ಇವು ತುಂಬಾ ಜನಪ್ರಿಯ ಸಾಕು ಪಕ್ಷಿಗಳಾಗಿರುವುದರಿಂದ ಗದ್ದೆಗೆ ಬೀಳುವ ಈ ಜಾತಿಯ ಹಕ್ಕಿಗಳನ್ನು ಬಲೆ ಹಾಕಿ ಹಿಡಿದು ಮಾರುತ್ತಾರೆ. ಇವು ಮೊದಲ ಬಾರಿಗೆ ಭಾರತ ದೇಶದ ಗುಜರಾತಿನ ಅಹಮದಾಬಾದ್‌ನಿಂದ ಮಾರುಕಟ್ಟೆಗೆ ರಫ್ತಾಗಿದ್ದುದರಿಂದ ಇವುಗಳಿಗೆ ಅವಾದವತ್ ಅಥವಾ ಅಮನಡಾವ (amandava) ಎನ್ನುವ ಹೆಸರು ಬಂದಿದೆ ಎನ್ನುವುದು ವಿಶೇಷ. ಚಿತ್ರದುರ್ಗದ ತಿಮ್ಮಣ್ಣನಾಯಕನ ಕೆರೆಯ ಸುತ್ತಮುತ್ತಲಿನಲ್ಲಿ ಕಂಡುಬಂದ ಈ ಹಕ್ಕಿಯನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆಹಿಡಿಯಲಾಯಿತು.

—ಎನ್.ಎನ್. ರಾಜು, ಚಿತ್ರದುರ್ಗ

## ವಿಷ್ಣುವರ್ಧನ್ ಬಳಸಿದ ಕಾರು

ಹೊಚ್ಚ ಹೊಸ ಕಾರಿನಂತೆ ಈ ಚಿತ್ರದಲ್ಲಿ ಕಾಣುತ್ತಿರುವ ಕಾರು 1983ರ ಮಾಡೆಲ್‌ನದ್ದು. ಕಾರಿನ ಸಂಖ್ಯೆ ಕೆಎ04 ಎಂ707. ಜಪಾನ್‌ನಲ್ಲಿ ತಯಾರಿಸಲ್ಪಟ್ಟ ಈ ಕಾರಿಗೆ 18 ಅಶ್ವ ಶಕ್ತಿಯಿದೆ. ಜೊತೆಗೆ 1200 ಕಿಲೋ ತೂಕದ, ನಾಲ್ಕು ಸಿಲಿಂಡರಿನ ಪೆಟ್ರೋಲ್ ವಾಹನ ಇದಾಗಿದ್ದು, ಈ ಕಾರು ಅಪರೂಪದ್ದು, ವಿಶೇಷವಾದದ್ದು. ಏಕೆಂದರೆ ಇದು ಚಿತ್ರ ನಟ ಸಾಹಸಸಿಂಹ ವಿಷ್ಣುವರ್ಧನ್ ಅವರ ಕೊಡುಗೆ! ಈ ಅಪರೂಪದ ಕಾರನ್ನು ಇತ್ತೀಚೆಗೆ ಧರ್ಮಸ್ಥಳದ 'ಮಂಜೂಷಾ' ಕಾರ್ ಮ್ಯೂಸಿಯಂನಲ್ಲಿ ಕಾಣಬಹುದಾಗಿದೆ.

—ನಾರಾಯಣ ಯಾಜಿ, ಶಿರಾಲಿ

